11-10 ಎ. ಎಂ.

ಶ್ರೀ ಹೆಚ್. ಡಿ. ರೇವಣ್ಣ :- ಮಾನ್ಯ ಸಭಾಧ್ಯಕ್ಷರೇ, (ಡಿ) ಗ್ರೂಪ್ ನೌಕರರಿಗೆ ನಿವೇಶನ ಹಂಚುವ ಕಾರ್ಯಕ್ರಮ ಇದೆ. ಆದರೆ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸಮಿತಿಯನ್ನು ಮಾಡಲಾಗಿದೆ ಅವರು ಸಮಿತಿಯಲ್ಲಿ ಆಯ್ಕೆ ಮಾಡಿ, ಯಾರ್ಯಾರು ನೌಕರರಿಗೆ ನಿಜವಾಗಿ ಸೈಟಿಲ್ಲ ಅಂತಹವರ ಪಟ್ಟಿ ಬಂದ ತಕ್ಷಣ ಅದನ್ನು ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಯು. ಬಿ. ಬಣಕಾರ್ :- ಮಾನ್ಯ ಉಪಾಧ್ಯಕ್ಷರೇ, ಎಷ್ಟು ದಿವಸಗಳಲ್ಲಿ ಈ ಕಾರ್ಯಕ್ರಮವನ್ನು ಪೂರ್ತಿಮಾಡುತ್ತಾರೆ?

ಶ್ರೀ ಹೆಚ್. ಡಿ. ರೇವಣ್ಣ :- 2 ರಿಂದ 3 ತಿಂಗಳು ಬೇಕಾಗುತ್ತದೆ.

ವಿಷಯ :- ಗ್ರಾಮ ಸಹಾಯಕರನ್ನು ಖಾಯಂ ಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 226 (1703)

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು) :- ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 48 ವರ್ಷಗಳಿಂದ 10,000 ಗ್ರಾಮಸಹಾಯಕರು ನಿಗದಿತ ಸಮಯಕ್ಕೆ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇವರ ನೇಮಕಾತಿಯನ್ನು ಖಾಯಂ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, (ಕಂದಾಯ ಮಂತ್ರಿಗಳು :-

ಅ) ಹೌದು.

ಆ) ಅಧ್ಯಕ್ಷರು, ಕರ್ನಾಟಕ ರಾಜ್ಯ ಕಂದಾಯ ಇಲಾಖೆ, ಗ್ರಾಮ ಸಹಾಯ ಕರುಗಳ ಸಂಘ (ರಿ) ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲ ಗ್ರಾಮ ಸಹಾಯ ಕರುಗಳನ್ನು ಖಾಯಂಗೊಳಿಸುವ ಬಗ್ಗೆ ರಿಟ್ ಅರ್ಜಿ ಸಂಖ್ಯೆ : 29424 : 94 ರನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯು ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವುದರಿಂದ, ಈ ಹಂತದಲ್ಲಿ ಖಾಯಂಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಕೆ. ಕುಮಾರ ಸ್ವಾಮಿ :- ಮಾನ್ಯ ಉಪಾಧ್ಯಕ್ಷರೇ, ಬಹುಶಃ ಈ ಕಂದಾಯ ನೌಕರರು ತುಂಬಾ ನತದೃಷ್ಟರು ಎಂದು ನಾನು ಭಾವಿಸಿದ್ದೇನೆ.

ಸುಮಾರು 48 ವರ್ಷಗಳ ಕಾಲ ಕೇವಲ 800 ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಸುಮಾರು 70 ಸಾವಿರಕ್ಕೂ ಹೆಚ್ಚು ದಿನಗೂಲಿ ನೌಕರರು ವಿವಿಧ ಇಲಾಖೆಗಳಲ್ಲಿ ಹತ್ತು ವರ್ಷಗಳ ಕಾಲ ಕೆಲಸಮಾಡಿದಂತಹವರು, ಅವರೆಲ್ಲರೂ ಕೂಡ ಖಾಯಂ ಆಗಿದ್ದಾರೆ. ಆದರೆ ಈ ಇಲಾಖೆಯಲ್ಲಿ ಇರತಕ್ಕಂಥವರಲ್ಲಿ ಶೇಕಡ 60 ಕ್ಕೂ ಹೆಚ್ಚು ಪರಿಶಿಷ್ಟ ಜಾತಿಯವರಾಗಿದ್ದಾರೆ. ಸರ್ಕಾರ ಇವರನ್ನು ಖಾಯಂಗೊಳಿಸದೇ ಇರುವುದಕ್ಕೆ ಕಾರಣ ವೇನು? ಬರೀ ನ್ಯಾಯಾಲಯದಲ್ಲಿ ಅರ್ಜಿ ಇದೆ ಎಂಬ ಒಂದೇ ಒಂದು ಕಾರಣಕ್ಕಾಗಿ ಸುಮ್ಮನೆ ಇರುವುದು ಸರಿಯಲ್ಲ. ನಿಯಮಾವಳಿಗಳನ್ನು ರಚಿಸಿಕೊಂಡು ಇವರನ್ನು ಖಾಯಂ ಮಾಡುವುದಕ್ಕೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು. ಇವೊತ್ತು ಅವರ ಜನನಮರಣದ ಪ್ರಶ್ನೆಯಾಗಿದೆ ಅದು. ಇವೊತ್ತು ಎಲ್ಲಾ ಕಡೆ ಚಳುವಳಿಯನ್ನು ಅವರು ಮಾಡುತ್ತಿದ್ದಾರೆ. ಸರ್ಕಾರ ಅದನ್ನು ಅರ್ಥಮಾಡಿಕೊಂಡು ಅವರನ್ನು ಖಾಯಂಗೊಳಿಸು ವುದಕ್ಕೆ ತಮ್ಮದೇ ಆದಂಥ ರೀತಿಯಲ್ಲಿ ಕಾನೂನಿನಡಿ ನಿಯಮಗಳನ್ನು ಮಾಡಿಕೊಂಡು ಇದರ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ 10,450 ಮಿತ ವೇತನ ಹುದ್ದೆಗಳ ಆಧಾರದ ಮೇಲೆ ಏನು ಗ್ರಾಮ ಸಹಾಯಕರು ಎಂದು ಕೆಲಸ ಮಾಡುತ್ತಿದ್ದಾರೆ. ಆದರೆ ಇವರನ್ನು ಡಿ ಗ್ರೂಪ್ ನೌಕರರರೆಂದು ಪರಿಗಣಿಸಬೇಕೆಂದು ಹೇಳಿ ಬಹಳ ದಿವಸಗಳಿಂದಲೂ ಸರ್ಕಾರದ ಮುಂದೆ ಈ ಪ್ರಸ್ತಾವನೆ ಇದೆ. ಏನಾಗಿದೆಯೆಂದರೆ, ಈ ಒಂದು ವಿಷಯದಲ್ಲಿ ಅವರು ತಮ್ಮನ್ನು ಖಾಯಂಗೊಳಿಸಬೇಕೆಂದು ಕೋರ್ಟಿಗೆ ಹೋಗಿದ್ದಾರೆ, ಇವೊತ್ತಿಗೂ ಅದು ತೀರ್ಮಾನವಾಗಿಲ್ಲ. ಆದರ ಜೊತೆಗೆ ಅಡಿಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆ ಯಲ್ಲಿ ಒಂದು ಕಮಿಟಿಯನ್ನು ಕೂಡ ಮಾಡಿದ್ದಾರೆ, ಅಂದರೆ ಇವರ ಸಂಬಳ ಎಷ್ಟಿರಬೇಕು, ಇವರನ್ನು ನಾವು ಯಾವರೀತಿ ರೆಗ್ಯುಲರೈಸ್ ಮಾಡಬೇಕು ಎಂದು ಹೇಳಿ. ನಾನು ಸದಸ್ಯರ ಭಾವನೆಯನ್ನು ಅರ್ಥಮಾಡಿಕೊಂಡಿದ್ದೇನೆ. ನಾನೂ ಕೂಡ ಎಷ್ಟು ಸಾಧ್ಯವಿದೆಯೊ ಅಷ್ಟು ಪ್ರಯತ್ನ ಮಾಡುತ್ತೇನೆ. ಇದು ಕೋರ್ಟಿನಲ್ಲಿ ಇರುವುದರಿಂದ ಈಗ ಇದರ ಬಗ್ಗೆ ಸಧ್ಯ ಹೇಳುವುದಕ್ಕೆ ಬರುವುದಿಲ್ಲ. ಆದರೆ ಕೋರ್ಟಿನಲ್ಲಿ ಏನಾದರೂ ಒಂದು ತೀರ್ಮಾನವಾಗಲಿ ಆಮೇಲೆ ಇದಕ್ಕೆ ಒಂದು ನಿರ್ಣಯವನ್ನು ಮಾಡೋಣ ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಮಾನ್ಯ ಸಚಿವರು ಹೇಳಿದಂತೆ ಕೋರ್ಟಿನಲ್ಲಿ ಇದೆ ಎಂದರೆ ಅದರ ಅರ್ಥ ಖಾಯಂಗೊಳಿಸ ಬೇಕು ಎಂಬ ವಿಷಯದ ಮೇಲೆಯೆ ಅವರು ಕೋರ್ಟಿಗೆ ಹೋಗಿದ್ದಾರೆ. ಸರ್ಕಾರ ಅವರನ್ನು ಖಾಯಂ ಮಾಡಿದ್ದೇ ಆದರೆ ಅವರು ಕೋರ್ಟಿನಲ್ಲಿರುವಂತದ್ದನ್ನು ವಾಪಸ್ಸು ತೆಗೆದುಕೊಂಡು ಬಿಡುತ್ತಾರೆ. ಅದಕ್ಕೆ ದಯವಿಟ್ಟು ಇದು ಗಂಭೀರವಾದ ಸಮಸ್ಯೆ ಇರುವುದರಿಂದ, ಈಗಾಗಲೇ ಅನೇಕ ವಿಭಾಗಗಳಲ್ಲಿದ್ದಂಥ 'ಡಿ' ಗ್ರೂಪ್ ನೌಕರರನ್ನು ಸರ್ಕಾರ ಖಾಯಂ ಮಾಡಿದ್ದಾರೆ. ದಯವಿಟ್ಟು ಈ ಕಂದಾಯ ಗ್ರಾಮ ಸಹಾಯಕರನ್ನು ಖಾಯಂ ಮಾಡಲಿಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು.

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಉಪಾಧ್ಯಕ್ಷರೇ, ಅಡಿಷನಲ್ ಚೀಫ್ ಸೆಕ್ರೆಟರಿಯವರು ಏನು ವರದಿಯನ್ನು ಒಪ್ಪಿಸುತ್ತಾರೆ ಆ ವರದಿ ಬಂದಮೇಲೆ ಬಹಳ ತ್ವರಿತಗತಿಯಿಂದ ಇದರ ಬಗ್ಗೆ ಇತ್ಯರ್ಥ ಮಾಡುತ್ತೇವೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಉಪಾಧ್ಯಕ್ಷರೇ, ವರದಿಯನ್ನು ತಕ್ಷಣ ತರಿಸಿಕೊಂಡು ಈ ಅಧಿವೇಶನ ಮುಗಿಯುವುದರೊಳಗೆ ಸರ್ಕಾರ ದಯಮಾಡಿ ಇದರ ಬಗ್ಗೆ ಆದೇಶವನ್ನು ಸರ್ಕಾರ ಮಾಡಬೇಕು, ಅವರ ಸ್ಥಿತಿಯನ್ನು ನೋಡುವುದಕ್ಕೆ ಆಗುತ್ತಿಲ್ಲ ಅಥವಾ ಸಧ್ಯಕ್ಕೆ ಒಂದು ಇನ್ನೂರು ರೂಪಾಯಿ, ಮುನ್ನೂರು ರೂಪಾಯಿ ಗಳನ್ನಾದರು ಜಾಸ್ತಿ ಮಾಡಿ.

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಜಾಸ್ತಿ ಮಾಡುವುದು ಬೇಡ, ಇದರ ಬಗ್ಗೆ ಈ ಸದನ ಮುಗಿಯುವುದರೊಳಗೆ ನಾನು ನಿರ್ಣಯ ಮಾಡುತ್ತೇನೆ ಎಂದು ಹೇಳುವುದು ಕಷ್ಟವಾಗುತ್ತದೆ. ಆ ವರದಿ ಬರಲಿ, ಬೇಕಾದರೆ ಅಡಿಷನಲ್ ಚೀಫ್ ಸೆಕ್ರೇಟರಿಯವರಿಗೆ ಬೇಗನೆ ವರದಿಯನ್ನು ನೀಡುವಂತೆ ಸೂಚನೆಯನ್ನು ನೀಡೋಣ. ವರದಿ ಬಂದತಕ್ಷಣ ಸರ್ಕಾರವೂ ಕೂಡ ಅವರ ಬಗ್ಗೆ ಮಾಡುವುದಿಲ್ಲ ಎಂಬ ನಿಲುವು ಏನೂ ಇಲ್ಲ. ಹಿಂದಿನಿಂದಲೂ ಕೂಡ ನಾವು ಅವರ ಡೇಟನ್ನು ಎಕ್ಸ್‌ಟೆಂಡ್ ಮಾಡಿಕೊಂಡು ಬಂದಿದ್ದೇವೆ. ಬಹುಶಃ 3-10-96ಕ್ಕೆ ಪುನಃ ಇವರ ಅವಧಿ ಮುಗಿ ಯುತ್ತ ದೆ ಎಂದು ನಾನು ತಿಳಿದುಕೊಂಡಿದ್ದೇನೆ, ಎಷ್ಟು ಸಾಧ್ಯವೊ ಅಷ್ಟು ಬೇಗ ಇದರ ಬಗ್ಗೆ ನಾನು ಇತ್ಯರ್ಥ ಮಾಡಿಸುತ್ತೇನೆ.

ವಿಷಯ :- ಬೆಂಗಳೂರು ನಗರದ ಕೆಲವು ಚಲನಚಿತ್ರ ಮಂಡಳಿಗಳಲ್ಲಿ ಆಂಗ್ಲ ಭಾಷಾ ಚಲನ ಚಿತ್ರಗಳ ಪ್ರದರ್ಶನ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2 (1009)

ಶ್ರೀಮತಿ ಪ್ರಮೀಳಾ ನೇಸರ್ಗಿ :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಅಪೇರಾ, ಇಂಪೀರಿಯಲ್, ಪ್ರದೀಪ್, ಸಂಗಂ, ಹಿಮಾಲಯ, ಮೇನಕ, ವಿಜಯಲಕ್ಷ್ಮಿ ಇತ್ಯಾದಿ ಚಲನಚಿತ್ರ ಮಂದಿರಗಳಲ್ಲಿ ಆಂಗ್ಲ ಭಾಷೆ ಚಲನಚಿತ್ರಗಳು ಅವ್ಯಾಹತವಾಗಿ ಪ್ರದರ್ಶನಗೊಳ್ಳುತ್ತಿರುವ ವಿಚಾರವು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಸರ್ಕಾರ ಇಂತಹ ಚಲನಚಿತ್ರಗಳನ್ನು ತಡೆಗಟ್ಟಲು ಯಾವುದೇ ಕ್ರಮಕ್ಕೆಗೊಳ್ಳದಿರಲು ಕಾರಣಗಳೇನು;

ಇ) ಇಂತಹ ಚಲನಚಿತ್ರಗಳನ್ನು ಪ್ರದರ್ಶಿಸುವ ಚಲನಚಿತ್ರಮಂದಿರಗಳ ಮಾಲೀಕರುಗಳ ವಿರುದ್ಧ ಹಾಗೂ ಚಲನಚಿತ್ರ ಪ್ರದರ್ಶಕರ ವಿರುದ್ಧ ಕೂಡಲೇ ತೀವ್ರ ಕ್ರಮ ಸರ್ಕಾರ ಕೈಗೊಳ್ಳುವುದೇ?